# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 2530 |
| ಸದಸ್ಯರ ಹೆಸರು | : | ಶ್ರೀ ಚಿದಾನಂದ್ ಎಂ. ಗೌಡ (ಪದವೀಧರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 23-03-2022 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಷ್ಟ್ರೀಯ ಹೆದ್ದಾರಿ-48 ರಲ್ಲಿ ವಾಹನಗಳ ದಟ್ಟಣೆಯಿಂದ ಸಾರ್ವಜನಿಕರಿಗೆ ಅನಾನುಕೂಲ ವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಷ್ಟ್ರೀಯ ಹೆದ್ದಾರಿ-4 (ಹೊಸ ನಂ.48) ಬೆಂಗಳೂರು - ಪುಣೆ ರಾಷ್ಟ್ರೀಯ ಹೆದ್ದಾರಿಯು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಯಲ್ಲಿದ್ದು, ರಾಜ್ಯದಲ್ಲಿ ಇದರ ಒಟ್ಟು ಉದ್ದ 589 ಕಿ.ಮೀ. ಇದರಲ್ಲಿ ಬೆಂಗಳೂರು- ನೆಲಮಂಗಲ ಭಾಗದ 29.5 ಕಿ.ಮೀ. ಉದ್ದದ ರಸ್ತೆ 6 ಪಥದ ರಸ್ತೆಯಾಗಿದ್ದು, ಬೆಂಗಳೂರು ಹತ್ತಿರ ಮೇಲ್ಸೇತುವೆಯ ದುರಸ್ತಿಯಿಂದ ತಾತ್ಕಾಲಿಕವಾಗಿ ಸಂಚಾರ ದಟ್ಟಣೆಯಾಗಿತ್ತು. ಈ ಸೇತುವೆಯ ಮೇಲೆ ಈಗ ಹಗುರ ವಾಹನಗಳಿಗೆ ಪ್ರವೇಶ ನೀಡಲಾಗಿದ್ದು, ವಾಹನದ ದಟ್ಟಣೆ ಕಡಿಮೆಯಾಗಿದೆ ಎಂದು NHAI ರವರು ವರದಿಸಿರುತ್ತಾರೆ.<br>ರಾಷ್ಟ್ರೀಯ ಹೆದ್ದಾರಿ-48 ರ ನೆಲಮಂಗಲದಿಂದ - ತುಮಕೂರು ಭಾಗದ ರಸ್ತೆ 32.5 ಕಿ.ಮೀ. ಉದ್ದವಿದ್ದು, ಇದು ನಾಲ್ಕು ಪಥದ ರಸ್ತೆಯಾಗಿರುವುದರಿಂದ ವಾಹನ ದಟ್ಟಣೆ ಇದೆ. ಈ ಭಾಗದ ರಸ್ತೆಯನ್ನು 6 ಪಥದ ರಸ್ತೆಯನ್ನಾಗಿ ಅಗಲೀಕರಣಗೊಳಿಸುವ ಕಾಮಗಾರಿಯನ್ನು NHAI ವತಿಯಿಂದ ಕೈಗೆತ್ತಿಕೊಳ್ಳಲಾಗುತ್ತಿದೆ. ಶೀಘ್ರವೇ ಕಾಮಗಾರಿ ಪ್ರಾರಂಭಿಸಲಾಗುವುದೆಂದು NHAI ರವರು ವರದಿಸಿರುತ್ತಾರೆ. ಉಳಿದಂತೆ ರಾಷ್ಟ್ರೀಯ ಹೆದ್ದಾರಿ-48 ರ ರಸ್ತೆಯ ಯಾವುದೇ ಭಾಗದಲ್ಲಿ ಸಂಚಾರ ದಟ್ಟಣೆ ಇರುವುದಿಲ್ಲ ಎಂದು NHAI ರವರು ವರದಿಸಿದ್ದಾರೆ. |
| ಆ. | ಸದರಿ ರಸ್ತೆಗೆ ಟೋಲ್ ಸಂಗ್ರಹಣಾ ಅವಧಿ ಯಾವಾಗ ಪ್ರಾರಂಭವಾಯಿತು; ಎಲ್ಲಿಯವರೆಗೆ ಟೋಲ್ ಸಂಗ್ರಹಣಾ ಅವಧಿ ಮುಂದುವರಿಯುವುದು; | ರಾಷ್ಟ್ರೀಯ ಹೆದ್ದಾರಿ-48 ರ ಬೆಂಗಳೂರು- ಪುಣೆ ರಸ್ತೆಯಲ್ಲಿ ಸ್ಥಾಪಿಸಲಾಗಿರುವ ಟೋಲ್ ಪ್ಲಾಜಾಗಳು ಪ್ರಾರಂಭವಾದ, ದಿನಾಂಕ ಮತ್ತು ಟೋಲ್ ಸಂಗ್ರಹಣಾ ಅವಧಿಯ ಮುಕ್ತಾಯವಾಗುವ ವಿವರವನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಇ. | ಸದರಿ ರಸ್ತೆಗೆ ಸರ್ವೀಸ್ ರಸ್ತೆ ನಿರ್ಮಿಸದಿರಲು ಕಾರಣವೇನು; | ರಾಷ್ಟ್ರೀಯ ಹೆದ್ದಾರಿ-48 ರ ಬೆಂಗಳೂರು-ನೆಲಮಂಗಲ ಭಾಗದ ರಸ್ತೆಯಲ್ಲಿ ಸರ್ವಿಸ್ ರಸ್ತೆ ನಿರ್ಮಿಸಲಾಗಿದೆ ಮತ್ತು ನೆಲಮಂಗಲ - ತುಮಕೂರು ಭಾಗದ ರಸ್ತೆಯಲ್ಲಿ ಕರಾರಿನಂತೆ ಸರ್ವಿಸ್ ರಸ್ತೆ ನಿರ್ಮಿಸಲಾಗಿದೆ. ಈ ಭಾಗದ ರಸ್ತೆಯನ್ನು 6 ಪಥದ ರಸ್ತೆಯನ್ನಾಗಿ ಉನ್ನತೀಕರಿಸಲಾಗುತ್ತಿದ್ದು, ಇದರಲ್ಲಿ ಸರ್ವಿಸ್ ರಸ್ತೆ ಅಳವಡಿಸಲಾಗಿದೆ ಎಂದು NHAI ರವರು ವರದಿಸಿರುತ್ತಾರೆ. |

| | | |
|---|---|---|
| ಈ. | ಸದರಿ ರಸ್ತೆಯನ್ನು ಅಷ್ಟಪಥ ಅಥವಾ ದಶಪಥ ರಸ್ತೆಯನ್ನಾಗಿ ಉನ್ನತೀಕರಿಸಲು ಕ್ರಮ ಕೈಗೊಳ್ಳಲಾಗುವುದೇ? (ವಿವರ ಒದಗಿಸುವುದು) | ರಾಷ್ಟ್ರೀಯ ಹೆದ್ದಾರಿ-48 ರ ರಸ್ತೆಯನ್ನು ಅಷ್ಟಪಥ ಅಥವಾ ದಶಪಥ ರಸ್ತೆಯನ್ನಾಗಿ ಉನ್ನತೀಕರಿಸುವ ಪ್ರಸ್ತಾವನೆ ಪ್ರಸ್ತುತ ಇರುವುದಿಲ್ಲ ಎಂದು NHAI ವರದಿಸಿದ್ದಾರೆ. |

ಕಡತ ಸಂಖ್ಯೆ: ಲೋಇ 116 ಸಿಎನ್‌ಹೆಚ್ 2022(ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು

# National Highways Authority of India

## Regional Office-Bangalore ANNEXURE-1 TO starred LCQ-2530

| Sl No. | PIU | Project Name | User fee plaza | Tollabel length | Starting date of toll collection | Closing date of toll collection | extension | Reason |
|---|---|---|---|---|---|---|---|---|
| 1 | Bangalore | Bangalore-Nelamangala | Towards Bangalore | 19.5 | 30.04.2021 | 30.04.2022 | - | |
| 2 | | | Towards Nelamangala | | | | | |
| 3 | Chitradurga | Nelamangala -Tumkur | Kulumepalya | 32.5 | 09.02.2004 | 21.06.2021 | 474 days Extension | 2 plazas Kulumepally and chokkenalli- tenure completed as on 20.07.2021 . Arbitrator has awarded 474 days of Extention of time. The same is challanged by NHAI in Honble high court of Delhi |
| 4 | | | Chokkenahalli | | | | | |
| 5 | | | Karjeevanahalli | 114 | 04.06.2011 | 03.06.2037 | - | |
| 6 | | | Guilalu | | | | | |
| 7 | | Chitradurga - Harihara | Hebbalu | 72.7 | 02.03.2021 | 02.03.2022 | extended upto deployment of New agency | |
| 8 | | Harihara - Haveri | Chalagere | 78.923 | 08.01.2021 | 08.01.2022 | extended upto deployment of New agency | |
| 9 | Dharwad | Belgaum Maharastra border | Bankapur | 22 | 08-01-2022 | 08-01-2023 | - | |
| 10 | | | Hattargi | | | | | |
| 11 | | Dharwad - Belgaum | Hiregabewadi | 79.36 | 04.05.2011 | 03.05.2041 | | |
| 12 | | Haveri-Hubli | Kognoli | 64 | 17.12.2020 | 17-03-2022 | | |
| | Toll with National Highways Zone (PWD) | | | | | | | |
| 1 | Hubli-Dharwad | Hubli-Dharwad bypass on NH-4 | Km 404.20 Gabbur | 30.35 | 06.05.2000 | 05.05.2024 | | |
| 2 | | | Km 407.600 near Nekarnagar | | | | | |
| 3 | | | Km 414.600 Tarihal | | | | | |
| 4 | | | Km 421.00 Yerikoppa | | | | | |
| 5 | | | Km 429.800 Kelageri | | | | | |
| 6 | | | Km 433.800 Narendra | | | | | |